# ವೇಣುನಾದ ಬಾರೋ ವೆಂಕಟರಮಣನೆ ಬಾರೋ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page no.: 89.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
4. **Ref.:** Samagra Dasa Sahity, Samputa 3.1 published by Kannada & Culture Dept, Govt of Karnataka, Bengaluru.
5. **Note:** Lyrics given without highlights are as per Ref. 1. The wordings given in yellow highlights are as per Ref. 2. The wordings as in Ref. 3 are fully matching with Ref. 2.
6. **Note:** Singer has followed lyrics as in Ref. 2.
7. **Note:** Ankita is different in the above books. We have considered Ref.1 as standard and taken that Ankita for listing.

| | |
|---|---|
| ರಾಗ: ಮೋಹನ ತಾಳ: ಅಟ | ರಾಗ ಶಂಕರಾಭರಣ ಆದಿ ತಾಳ |
| | |
| ವೇಣುನಾದ ಬಾರೋ | ವೇಣುನಾದ ಬಾರೋ |
| ವೆಂಕಟ ರಮಣನೆ ಬಾರೋ | ಶ್ರೀ ವೆಂಕಟ ರಮಣನೆ ಬಾರೋ |
| ಬಾಣನ ಭಂಜಿಸಿದಂಥ | ಬಾಣನ ಭಂಗಿಸಿದಂಥ |
| ಭಾವಜನಯ್ಯನೆ ಬಾರೋ ‖ ಪ ‖ | ಭಾವಜನಯ್ಯನೆ ಬಾರೋ |
| | |
| ಪೂತನಿಯ ಮೊಲೆಯುಂಡ ನವ- | ಪೂತನಿಯ ಮೊಲೆಯುಂಡ ನವ- |
| ನೀತ ಚೋರನೆ ಬಾರೋ | ನೀತ ಚೋರನೆ ಬಾರೋ |
| ದೈತ್ಯ ರಾವಣನ ಸಂಹರಿಸಿದ | ಭೀತ ರಾವಣನ ಸಂಹರಿಸಿದ |
| ಸೀತಾ ನಾಯಕ ಬಾರೋ ‖ ೧ ‖ | ಸೀತಾ ನಾಯಕ ಬಾರೋ |
| | |
| ಹಲ್ಲು ಮುರಿದು ಮಲ್ಲರ ಗೆದ್ದ | ಬಿಲ್ಲ ಮುರಿದು ಮಲ್ಲರ ಗೆದ್ದ |
| ಫುಲ್ಲನಾಭನೆ ಬಾರೋ | ಫುಲ್ಲನಾಭನೆ ಬಾರೋ |
| ಗೊಲ್ಲತಿಯರೊಡನೆ ನಲಿವ | ಗೊಲ್ಲತೇರೊಡನೆ ನಲಿವ |
| ಚೆಲ್ವ ಮೂರುತಿ ಬಾರೋ ‖ ೨ ‖ | ಚೆಲುವ ಮೂರುತಿ ಬಾರೋ |
| | |
| ಮಂದರವನೆತ್ತಿದಂಥ | ಮಂದರಗಿರಿ ಎತ್ತಿದಂಥ |
| ಇಂದಿರಾ ರಮಣನೆ ಬಾರೋ | ಇಂದಿರೆ ರಮಣನೆ ಬಾರೋ |

| | |
|---|---|
| ಕುಂದದೆ ಗೋವುಗಳ ಕಾಯ್ದ | ಕುಂದದೆ ಗೋವುಗಳ ಕಾಯಿದ |
| ನಂದ ನಂದನನೆ ಬಾರೋ    || ೩ || | ಪುಂಡರೀಕಾಕ್ಷನೆ ಬಾರೋ |
| | |
| ನಾರಿಯರ ಮನೆಗೆ ಪೋಪ | ನಾರಿಯರ ಮನೆಗೆ ಪೋಗುವ |
| ವಾರಿಜಾಕ್ಷನೆ ಬಾರೋ | ವಾರಿಜನಾಭನೆ ಬಾರೋ |
| ಈರೇಳು ಭುವನವ ಕಾಯ್ವ | ಈರೇಳು ಭುವನವ ಕಾಯುವ |
| ಮಾರನಯ್ಯನೆ ಬಾರೋ    || ೪ || | ಮಾರನಯ್ಯನೆ ಬಾರೋ |
| | |
| ಶೇಷ ಶಯನ ಮೂರುತಿಯಾದ | ಶೇಷ ಶಯನ ಮೂರುತಿಯಾದ |
| ವಾಸುದೇವನೆ ಬಾರೋ | ವಾಸುದೇವನೆ ಬಾರೋ |
| ದಾಸರೊಳು ವಾಸವಾದ | ದಾಸರೊಳು ದಾಸನಾದ |
| ಶ್ರೀಶ ಪುರಂದರ ವಿಠಲ ಬಾರೋ    || ೫ || | ಪುರಂದರ ವಿಠಲ ಬಾರೋ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಬಾಣನ...** -- ಬಲಿಚಕ್ರವರ್ತಿಯ ಮಗನಾದ ಬಾಣಾಸುರನ ಮಗಳಾದ ಉಷೆಯನ್ನು, ಅನಿರುದ್ಧನು (ಕೃಷ್ಣನ ಮಗ ಪ್ರದ್ಯುಮ್ನ, ಅವನೇ ಮನ್ಮಥ, ಭಾವಜ; ಅವನ ಮಗ ಅನಿರುದ್ಧ) ಕದ್ದೊಯ್ದು ಮದುವೆಯಾದದ್ದು ಇಲ್ಲಿನ ಸಂದರ್ಭ.

**ಭಂಗಿಸು** = ಅಪಮಾನ ಮಾಡು, ಸೋಲಿಸು, ನಾಶ ಮಾಡು

**ಬಿಲ್ಲ ಮುರಿದು...** – ಕಂಸನ ಆಸ್ಥಾನದಲ್ಲಿ

**ನವನೀತ** = ಬೆಣ್ಣೆ

**ಗೊಲ್ಲತೇರೊಡನೆ** -- ಗೊಲ್ಲತಿಯರೊಡನೆ; ಕವಾಡಿಗರ ಹೆಂಗೆಳೆಯರನ್ನು ಕೂಡಿಕೊಂಡು

**ಈರೇಳು ಭುವನವ** – ಹದಿನಾಲ್ಕು ಲೋಕಗಳನ್ನು

**ಮಾರನಯ್ಯ** = ಮನ್ಮಥ ಜನಕ, ವಿಷ್ಣು

**Classification:** Keerthane
**Ankita:** srisha purandara vittala
**Location:** Tirupati
**Category:** Krishna Leele
**Group Words:** srinivasa, venu, putani, ravana, sita, rama, Krishna, shesha, benne, kamsa, govu, loka, billu, kalla,
**Pravachana:** NA
**Explanation:** NA